ಗಟ್ಟಿಯಾಗಿ ಆತು ಹಿಡಿಯಲು ಬೇಕಾದ ತಯಾರಿಯನ್ನು ನಾವು ಕಲಿಯಬೇಕಾದ್ದು ಈ ವಿಶ್ವಾತ್ಮಕ ಪ್ರತಿಮೆಗಳಿಂದ.

ನಾನು ದಣಿವಿನ ದಿನಗಳ/ ನೋಡಿದ್ದೇನೆ,/ ಬದುಕು ಮುಖ ತಿರುಹುವುದನ್ನೂ ನೋಡಿದ್ದೇನೆ/ ಅಂತೆ, ನನ್ನ ಅಸ್ತಿತ್ವವೇ/ ಇಲ್ಲದಂತೆ/ ನಿನ್ನೊಲವಿನ ಬೆಂಕಿಯಲ್ಲಿ/ ಉರಿಯ ಬಯಸುತ್ತೇನೆ/ ಕೊನೆಗೆ ನನ್ನಾತ್ಮವೂ/ ಕರ್ಪೂರದಂತೆ ಉರಿದು/ ಹೋಗಲಿ, ಯಾವ ಕುರುಹೂ/ ಬಿಡದಂತೆ,/ ಎಂದೂ ಮತ್ತೆ ಹುಟ್ಟದಂತೆ

ಇದೊಂದು ಅನುಭಾವದ ಮನಃಸ್ಥಿತಿ. 'ನಾನೆನ್ನೆ ನೀನೆನ್ನೆ' ಎನ್ನುವ ಅಕ್ಕನ ಉದ್ಗಾರದಂತೆ. ಈ ಎರಡಕ್ಕೂ ವ್ಯತ್ಯಾಸವಿದೆ ನಿಜ. ಅಕ್ಕನ ವಚನವು ಸಾರ್ಥಕ ಸಂಬಂಧಕ್ಕೆ ಬರೆದ ಷರಾದಂತೆ ಕಾಣುತ್ತದೆ. ಮುಕ್ತಾಯಕ್ಕನವರ ಈ ಕವಿತೆ, ಅದು ಅಪೂರ್ಣವೇ ಆದರೂ ಅಡ್ಡಿಯಿಲ್ಲ, ನನಗೆ ಸಿಕ್ಕಷ್ಟು ಸಾಕು, ಇಂದು ಅದು ಇದೆಯೋ ಇಲ್ಲವೋ, ಆದರೆ ಇತ್ತಲ್ಲ ಒಮ್ಮೆ, ಅದರಲ್ಲಿಯೇ ನಾನು ಕರಗಿ ಬಿಡಬೇಕು ಎನ್ನುವ ತಹತಹ ಹೊಂದಿದೆ. ಆ ತಹತಹ, ಇನ್ನು ಮುಂದೆ ನನಗೆ ಮತ್ತೇನೋ ಬೇಕು, ಎನ್ನುವ ಆಸೆಯೇ ಹುಟ್ಟಬಾರದು ಎನ್ನುವಷ್ಟು ತೀವ್ರವಾದುದು. ಬದುಕಿಡೀ ಇದರ ಧ್ಯಾನದಲ್ಲಿಯೇ ಕಳೆಯುವುದಾದರೆ ಸಾಕಲ್ಲ. ಗಮನಿಸಬೇಕಾದ ಸಂಗತಿಯೆಂದರೆ, ಬದುಕು ಮುಖ ತಿರುಗಿಸಿದಾಗಲೂ ಕವಿಯಲ್ಲಿ ಸಿನಿಕತನದ ಸುಳಿವಿಲ್ಲ. ಹಾಗೆಂದು ಅಲ್ಪತೃಪ್ತಿಯ, ಪಲಾಯನವಾದದ ಧೋರಣೆಯೂ ಅಲ್ಲ. ಸಿಕ್ಕಾಗ ಸಿಕ್ಕಿದ್ದನ್ನು ಜೀವೋತ್ಕಟವಾಗಿ ಜೀವಿಸಿದಾಗ ಮಾತ್ರ ಹುಟ್ಟುವ ಮನಃಸ್ಥಿತಿ ಇದು. ಗಜಲ್‌ಗಳನ್ನು 'ಗಳಿಗೆಯ ಸ್ಮಾರಕ' ಎಂದು ಸಾಮಾನ್ಯವಾಗಿ ಕರೆಯುತ್ತಾರೆ. ಆದರೆ, ಮುಕ್ತಾಯಕ್ಕನವರ ಕವಿತೆಗಳು ನಿಜ ಕವಿತೆಗಳಂತೆ ನಮ್ಮನ್ನು ಮತ್ತೆ ಮತ್ತೆ ಮಾತುಕತೆಗೆ ಆಹ್ವಾನಿಸುತ್ತವೆ.

ನಾನು ನಿನ್ನ ಬಗೆಗೆ/ ಹೇಳಿದ್ದೇ ತಡ,/ ಇರುಳು ಸಾವಿರ ಕಣ್ಣು/ ತೆರೆದು ನಿನ್ನನ್ನು ನೋಡತೊಡಗಿತು ಮತ್ತೆ/ ಕತ್ತಲೆಯಲ್ಲಿ ನಿನ್ನ ಮುಖ/ ಕಾಣಲು ಚಂದ್ರನ/ ಕೈ ದೀವಿಗೆ ಹಿಡಿದುಕೊಂಡಿತು

ಕೊಟ್ಟದ್ದರ ಬಗ್ಗೆ ವಿಶ್ವಾಸ, ಪಡೆದದ್ದರ ಬಗ್ಗೆ ಕೃತಜ್ಞತೆ – ಇವು ಬದುಕು ಮತ್ತು ಸಂಬಂಧಗಳನ್ನು ಉದಾತ್ತಗೊಳಿಸುತ್ತಾ ಹೋಗುತ್ತವೆ. ಇದಕ್ಕೆ ಸಹಜೀವಿಗಳ ಬಗ್ಗೆ ಅನುಭೂತಿಯೊಂದು ಬೇಕು. ಇದೊಂದು ಅಸಾಧ್ಯವಾದ, ಆದರ್ಶದ ಮನಃಸ್ಥಿತಿಯೆಂದೇ ನಂಬಲಾಗುತ್ತದೆ. ಆದರೆ, ಇದು ಬದುಕನ್ನು ಅದರ ಅಪರಿಹಾರ್ಯ ಸಂಗತಿಗಳ ಜೊತೆಯಲ್ಲಿ, ನೆರಳಿನಂತಿರುವ ಏಕಾಂತದ ಜೊತೆಯಲ್ಲಿ ಪ್ರೀತಿಸಬಹುದಾದ ಅತ್ಯುತ್ತಮ ದಾರಿ ಎಂದು ಮುಕ್ತಾಯಕ್ಕ ನಂಬಿದ್ದಾರೆ. ಏಕಾಂತದ ಜೊತೆಗಿನ ಸಾಂಗತ್ಯವು ಏಕಾಂಗಿಯದ್ದಲ್ಲ, ಅದು ಇತರರ, ಇತರ ಸಂಗತಿಗಳ ಮೂರ್ತ ಗೈರುಹಾಜರಿಯಲ್ಲಿ ಅಮೂರ್ತವಾಗಿ ಕಟ್ಟಿಕೊಳ್ಳುವ ಸ್ನೇಹದ್ದು. ಮುಕ್ತಾಯಕ್ಕನವರ ಈ ಕವಿತೆಗಳನ್ನು ಓದುತ್ತಿದ್ದರೆ ಅಕ್ಕನ ಅಕ್ಕನನ್ನೋ ತಂಗಿಯನ್ನೋ ಮಾತನಾಡಿಸಿದ ಅನುಭವವಾಗುತ್ತದೆ. ಇಲ್ಲಿನ ಗಜಲ್‌ಗಳ ಅಪ್ರತಿಮ ಚೆಲುವು ಕನ್ನಡ ಕಾವ್ಯದ ಚೆಲುವನ್ನು ಹೆಚ್ಚಿಸಿದೆ. ನಾನೆಂದೂ ನೋಡದ, ಆದರೆ ನನ್ನಲ್ಲಿ ಸದಾ ಪ್ರೀತಿ ಮತ್ತು ಕುತೂಹಲವನ್ನು ಹುಟ್ಟಿಸುತ್ತಲೇ ಇರುವ ಮುಕ್ತಾಯಕ್ಕ ನನ್ನೊಳಗಿನ ಕಾವ್ಯಪ್ರೀತಿಯನ್ನು ಈ ಸಂಕಲನದ ಮೂಲಕ ಮತ್ತಷ್ಟು ಹೆಚ್ಚಿಸಿದ್ದಾರೆ.